ಟಿಂಕು ಮೊಲಕ್ಕೆ ಸಮಧಾನವಾಗದೇ ಸಮೀಪದಲ್ಲೆಲ್ಲಾ ಹುಡುಕಾಡತೊಡಗಿತು. ಆಶ್ರಮದಿಂದ ತುಸು ದೂರದಲ್ಲಿ ಮೂಳೆಗಳ ರಾಶಿ ಕಂಡು ಬಂದಿತು. ಟಿಂಕು ಮೊಲಕ್ಕೆ ಅನುಮಾನವಾಗಿ, ಸನ್ಯಾಸಿ ನರಿಯ ಬೆನ್ನು ಹತ್ತಿತು. ಕಳ್ಳತನದಿಂದ ಪ್ರಾಣಿಯನ್ನು ತಿನ್ನುತ್ತ, ಕಳ್ಳ ಸನ್ಯಾಸಿಯಂತೆ ವರ್ತಿಸುತ್ತಿದ್ದ ನರಿಯ ಬಗ್ಗೆ ಗೊತ್ತಾಯಿತು. ಇದಕ್ಕೆ ಬಲಿಯಾದ ತನ್ನ ತಾಯಿಯನ್ನು ನೆನೆದು ದುಃಖಿಸಿತು. ಇದರ ಬಣ್ಣ ಬಯಲು ಮಾಡಿ ತಕ್ಕ ಶಾಸ್ತಿ ಮಾಡಬೇಕೆಂದು ನಿರ್ಧರಿಸಿತು. ಆದರೇನು ಮಾಡುವುದು, ಎಲ್ಲಾ ಪ್ರಾಣಿಗಳು ಈ ಕಳ್ಳ ನರಿಯನ್ನು ನಂಬಿಬಿಟ್ಟಿವೆ. ಅದನ್ನು ಬದಲಾಯಿಸುವುದು ಅಷ್ಟು ಸುಲಭವಲ್ಲ. ಹಾಗೇ ತಾನೊಬ್ಬನೇ ಹೊರಾಡುವಷ್ಟು ಶಕ್ತನಲ್ಲ ಎಂದು ಚಿಂತಾಕ್ರಾಂತವಾಯಿತು.

ಅದೊಂದು ದಿನ ತಕ್ಕ ಸಮಯವೂ ಕೂಡಿ ಬಂದಿತ್ತು. ಆ ಸಮಯದಲ್ಲಿ ಕಾಡಿನ ರಾಜ, ಸಿಂಹನಿಗೆ ಯಾವುದೋ ಕಾಯಿಲೆ ಬಂದಿದೆ ಎಂಬ ಸುದ್ದಿ ಹರಡಿತು. ಅದನ್ನು ತಿಳಿಯುತ್ತಿದ್ದಂತೆ ಇದನ್ನೆ ಬಳಸಿಕೊಳ್ಳಲು ಟಿಂಕು ಮೊಲವು ಸಜ್ಜಾಯಿತು. ಸಿಂಹದ ಬಳಿ ಹೋಗಿ 'ನಿಮ್ಮ ಕಾಯಿಲೆ ವಾಸಿಯಾಗಬೇಕೆಂದರೆ, ಪ್ರಾಣಿಗಳನ್ನು ತಿನ್ನದೇ, ಕೇವಲ ಹಣ್ಣು–ಹಂಪಲು ತಿನ್ನುವ ನರಿಯ ಮಾಂಸವನ್ನು ನೀವು ತಿನ್ನಬೇಕು. ಆಗ ನಿಮ್ಮ ಕಾಯಿಲೆ ವಾಸಿಯಾಗಿ ನೀವು ಮೊದಲಿನಂತೆ ಆಗುತ್ತೀರ' ಎಂದ್ಹೇಳಿ ನಂಬಿಸಿತು. ಅದನ್ನು ನಂಬಿದ ಸಿಂಹ, ಅಂತಹ ನರಿ ಎಲ್ಲಿ ಸಿಗುತ್ತದೆ ಎಂದು ಕೇಳಿತು. ಇದನ್ನೇ ಕಾದಿದ್ದ ಟಿಂಕು ಮೊಲ ಕಪಟಿ ಸನ್ಯಾಸಿ ನರಿಯ ಬಗ್ಗೆ ತಿಳಿಸಿತು. ತಕ್ಷಣವೇ ಸಿಂಹ ಅದನ್ನು ಹುಡುಕಲು ಹೊರಟಿತು. ಟಿಂಕು ಮೊಲ ಸಿಂಹವನ್ನು ಹಿಂಬಾಲಿಸಿತು.

ದೂರದಲ್ಲಿ ಸಿಂಹ, ಆ ಕಳ್ಳ ನರಿಯನ್ನು ಕೊಂದು ತಿನ್ನುವುದನ್ನು ಕಂಡು ಟಿಂಕು ಮೊಲ ಸಮಾಧಾನಗೊಂಡಿತು. ದೈಹಿಕವಾಗಿ ಆಗದ ಕೆಲಸವು ಉಪಾಯದಿಂದ ಆಗಿದ್ದಕ್ಕೆ ಟಿಂಕು ಮೊಲ ಖುಷಿಗೊಂಡು ಮನೆಯತ್ತ ಜಿಗಿಯುತ್ತ ತೆರಳಿತು.

**–ಎಂ. ಮಂಜುಳಾ**
**ಸಿದ್ಧರಾಜು, ಭದ್ರಾವತಿ**




ಒಂದೂರಿನಲ್ಲಿ ಸೀತಾರಾಮ ಎಂಬ ದುರಾಸೆಯ ಮನುಷ್ಯನೊಬ್ಬ ವಾಸಿಸುತ್ತಿದ್ದನು. ಅದೊಂದು ಭಯಂಕರ ಚಳಿಗಾಲದ ತಿಂಗಳು. ಬೆಳಗಿನ ಜಾವ ವಿಪರೀತ ಚಳಿ ಇರುತ್ತಿತ್ತು. ಬೆಂಕಿ ಕಾಯಿಸಲು ಅಗತ್ಯವಿದ್ದಷ್ಟು ಕಟ್ಟಿಗೆಗಳೆಲ್ಲಾ ಖಾಲಿಯಾಗಿದ್ದನ್ನು ಗಮನಿಸಿದ ಸೀತಾರಾಮನು ಅದೊಂದು ಮಧ್ಯಾಹ್ನ ಒಣ ಕಟ್ಟಿಗೆ ತರಲೆಂದು ಕೊಡಲಿ ಹಿಡಿದು ಊರಿನ ಪಕ್ಕದಲ್ಲೇ ಇದ್ದ ಕಾಡಿಗೆ ಹೋದನು. ಕಾಡಿನ ಮಧ್ಯಭಾಗಕ್ಕೆ ಹೋದಾಗ ಅವನಿಗೆ ಅಲ್ಲೊಂದು ದೊಡ್ಡ ಅರಳೀಮರ ಕಾಣಿಸಿತು. ಹಿಂದು ಮುಂದು ಯೋಚಿಸದೇ ಅವನು ಮರದ ಕೊಂಬೆಯನ್ನು ಕೊಡಲಿಯಿಂದ ಕತ್ತರಿಸಲು ಪ್ರಾರಂಭಿಸಿದನು. ಕೂಡಲೇ ಮರವು ಮಾತನಾಡಲು ಪ್ರಾರಂಭಿಸಿತು.

'ಅಯ್ಯಾ ಮಿತ್ರಾ, ಕಾಡಿನಲ್ಲಿ ಅಷ್ಟೊಂದು ಮರಗಳಿದ್ದರೂ ನೀನು ನನ್ನನ್ನೇ ಏಕೆ ಕತ್ತರಿಸುತ್ತಿರುವೆ. ನಾನು ಈ ಕಾಡಿನ ವೃಕ್ಷರಾಜ. ಬೇರೆ ಯಾವುದಾದರೂ ಸಣ್ಣ ಮರವನ್ನು ಕಡಿದುಕೊಂಡು ಕೊಂಡೊಯ್ಯಿ' ಎಂದಿತು.

ಮರ ಮಾತನಾಡುತ್ತಿರುವುದನ್ನು ಕಂಡು ಆಶ್ಚರ್ಯಗೊಂಡ ಸೀತಾರಾಮನು 'ಎಲೈ ವೃಕ್ಷರಾಜನೇ.. ನಾನು ನಿನ್ನ ಕೊಂಬೆಗಳನ್ನೇ ಕತ್ತರಿಸಬೇಕು. ನನಗೆ ಹೆಚ್ಚಿನ ಕಟ್ಟಿಗೆಯ ಅವಶ್ಯಕತೆಯಿದೆ' ಎಂದನು.

ಅದಕ್ಕೆ ಮರವು 'ಕೇವಲ ಚಳಿ ಕಾಯಿಸಲಷ್ಟೇ ಆದರೆ ನನ್ನ ಒಣಗಿದ ತರಗೆಲೆಗಳನ್ನು ಉದುರಿಸುತ್ತೇನೆ. ಅವನ್ನು ಕೊಂಡೊಯ್ದು ಬೆಂಕಿ ಹಾಕಿಕೋ' ಎಂದು ಮನವಿ ಮಾಡಿತು.

ಅದಕ್ಕೊಪ್ಪದ ಸೀತಾರಾಮನು 'ನಿನ್ನ ತರಗೆಲೆಗಳು ಇನ್ನೆಷ್ಟು ಹೊತ್ತು ಉರಿದಾವು. ನನಗೆ ಕಟ್ಟಿಗೆಯೇ ಬೇಕು' ಎಂದು ಹಠಹಿಡಿದನು.

ಆಗ ಮರವು 'ಅಯ್ಯಾ, ನಾನು ಉದುರಿಸುವ ತರಗೆಲೆಗಳು ಭೂಮಿಗೆ ಬಿದ್ದಾಕ್ಷಣ ಬಂಗಾರದ ಎಲೆಗಳಾಗುತ್ತವೆ. ನೀನು ಅವುಗಳನ್ನು ಮಾರಿಕೊಂಡು ಕಟ್ಟಿಗೆ ಕೊಂಡುಕೋ' ಎಂದಿತು. ಅದಕ್ಕೆ ಒಪ್ಪಿದ ಸೀತಾರಾಮನು 'ಹಾಗೆಯೇ ಮಾಡು' ಎಂದನು.

ಒಪ್ಪಂದದಂತೆ ಮರವು ಒಂದು ಎಲೆಯನ್ನು ಉದುರಿಸಿತು. ಅದು ನೆಲಕ್ಕೆ ತಾಕಿದಾಕ್ಷಣ ಬಂಗಾರದ ಎಲೆಯಾಗಿ ಮಾರ್ಪಟ್ಟಿತು. ಈ ಪವಾಡವನ್ನು ಕಣ್ಣಾರೆ ಕಂಡ ಸೀತಾರಾಮನು ಬೆರಗಾಗಿ ಹೋಗಿ ಅದನ್ನು ಎತ್ತಿ ಸಂಗ್ರಹಿಸಿಟ್ಟುಕೊಂಡನು. ಪುನಃ ಎಲೆಯನ್ನು ಉದುರಿಸುವಂತೆ ಮರವನ್ನು ಕೇಳಿದನು. ಮರವು ಮತ್ತೊಂದು ಎಲೆಯನ್ನೂ ಉದುರಿಸಿತು. ಸೀತಾರಾಮನು ಅದನ್ನೂ ಎತ್ತಿಟ್ಟುಕೊಂಡನು. ಮರವು ಸಾಕು ಎನ್ನುತ್ತಿದ್ದರೂ ಸೀತಾರಾಮನ ದುರಾಸೆಗೆ ಕೊನೆಯಿಲ್ಲವಾಯಿತು. ಅವನು ಮತ್ತೆ ಮತ್ತೆ ಎಲೆಯನ್ನು ಉದುರಿಸುವಂತೆ ಬೇಡಿಕೆಯಿಡುತ್ತಿದ್ದನು. ಹೀಗೇ ಉದುರಿಸುತ್ತಾ ಹೋಗಿ ಮರದಲ್ಲಿನ ಎಲೆಗಳೆಲ್ಲಾ ಖಾಲಿಯಾಗಿ ಕೊನೆಗೆ ಒಂದೇ ಒಂದು ಎಲೆ ಮಾತ್ರ ಉಳಿದುಕೊಂಡಿತು. ಸೀತಾರಾಮನು ಅದನ್ನೂ ಉದುರಿಸುವಂತೆ ಬೇಡಿಕೆಯಿಟ್ಟನು.

ಆಗ ಮರವು ಮನುಷ್ಯನ ದುರಾಸೆಗೆ ಬುದ್ಧಿ ಕಲಿಸಬೇಕೆಂದುಕೊಂಡು 'ಕೊನೆಯ ಎಲೆಯು ನೆಲಕ್ಕೆ ತಾಗಿದರೆ ನೀನು ಇದುವರೆಗೂ ಕೂಡಿಟ್ಟುಕೊಂಡಿರುವ ಬಂಗಾರದ ಎಲೆಗಳೆಲ್ಲವೂ ಸಾಮಾನ್ಯ ತರಗೆಲೆಗಳಾಗುತ್ತವೆ. ಆದ್ದರಿಂದ ಇಲ್ಲಿಗೆ ಸಾಕುಮಾಡಿ ಮನೆಗೆ ತೆರಳು' ಎಂದು ಬುದ್ಧಿ ಹೇಳಿತು. ದುರಾಸೆಯಿಂದಾಗಿ ಬುದ್ಧಿಗೆ ಮಂಕು ಕವಿದಿದ್ದರಿಂದ ಸೀತಾರಾಮನು ಪಟ್ಟು ಬಿಡದೇ ಕೊನೆಯ ಎಲೆಯನ್ನೂ ಉದುರಿಸುವಂತೆ ಕೂಗಾಡಿದನು. ಬೇಸತ್ತ ಮರವು ಕೊನೆಯ ಎಲೆಯನ್ನೂ ಉದುರಿಸಿತು. ಆ ಎಲೆಯು ನೆಲಕ್ಕೆ ತಾಗಿದಾಕ್ಷಣ ಸೀತಾರಾಮನ ಬಳಿಯಿದ್ದ ಬಂಗಾರದ ಎಲೆಗಳೆಲ್ಲವೂ ಸಾಮಾನ್ಯ ತರಗೆಲೆಗಳಾಗಿ ಬದಲಾದವು. ತನ್ನ ದುರಾಸೆಗೆ ಬೆಲೆ ತೆತ್ತ ಸೀತಾರಾಮನು ಕೈಗೆ ಸಿಕ್ಕಿದ್ದನ್ನು ಕಳೆದುಕೊಂಡೆನಲ್ಲಾ ಎಂದು ಗೋಳಾಡಿದನು.

**– ಪ.ನಾ.ಹಳ್ಳಿ. ಹರೀಶ್ ಕುಮಾರ್**